ಸಿ) ಪಟ್ಟಿಯನ್ನು ಅನುಬಂಧ - ಎ ಮತ್ತು ಬಿ ನಲ್ಲಿ ಲಗತ್ತಿಸಿದೆ.

ಡಿ) ನೀಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಎಫ್) ಕಾನೂನಿನಂತೆ ಖುಲ್ಲಾ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರಿನಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳು

46 - ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

1) ಬೆಂಗಳೂರಿನಲ್ಲಿರುವ ಉದ್ಯೋಗ ವಿನಿಮಯ ಕಛೇರಿಗಳ ಅಧಿಕಾರಿಗಳು, ನೊಂದಾಯಿಸಿದ ಅಭ್ಯರ್ಥಿಗಳ ಹೆಸರುಗಳನ್ನು ಕಾನೂನು ರೀತ್ಯ ನಿಯೋಜಕರುಗಳಿಗೆ ಕಳುಹಿಸುತ್ತಿಲ್ಲದಿರುವುದು 'ಸರ್ಕಾರದ ಗಮನಕ್ಕೆ ಬಂದಿದೆಯೆ?

2) ಅಭ್ಯರ್ಥಿಗಳ ಹೆಸರುಗಳನ್ನು ಕಳುಹಿಸುವಲ್ಲಿ ವಿಳಂಬ ಹಾಗೂ ಅಧಿಕಾರಿಗಳ ಕಾನೂನು ಬಾಹಿರ ಕ್ರಮಗಳಿಂದ ಅಭ್ಯರ್ಥಿಗಳ ವಯೋಮಿತಿ ಮೀರಿ, ಉದ್ಯೋಗಕ್ಕೆ ಅನರ್ಹರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

3) ದಿನಾಂಕ 21-6-76 ರಂದು ಹೆಸರನ್ನು ನೊಂದಾಯಿಸಿದ ಶ್ರೀ ಎನ್. ರುಕುಮಂಗೋತ್ತಮ್ (ಪರಿಶಿಷ್ಟ ಜಾತಿ ಅಭ್ಯರ್ಥಿ) ಉದ್ಯೋಗ ವಿನಿಮಯ ಕಛೇರಿ ನೊಂದಣಿ ಸಂಖ್ಯೆ : 7109 : 76ಎಕ್ಸ್ 02.10 ಸಂಖ್ಯೆ 36 ಕೆ.ನಂ. 4ನೇ ರಸ್ತೆ. ಡಿವಿಜನ್ ನಂ. 77 ಭಾಷತಿನಗರ ಈ ಅಭ್ಯರ್ಥಿಗೆ ಇದುವರೆವಿಗೂ ಉದ್ಯೋಗದ ಬಗ್ಗೆ ಯಾವುದೇ ಮಾಹಿತಿ ಬಾರದಿದ್ದು, ಪ್ರಸ್ತುತ ಪರಿಸ್ಥಿತಿ ಸರ್ಕಾರ ತಿಳಿಸುವುದೆ?

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

1) ಬಂದಿಲ್ಲ

2) ಬಂದಿಲ್ಲ

3) ಶ್ರೀ ರುಕುಮಂಗೋತ್ತಮ್ ಇವರ ನೊಂದಣಿ ಸಂಖ್ಯೆ 11601 : 82 ರಾಷ್ಟ್ರೀಯ ವೃತ್ತಿ ಸಂಖ್ಯೆ ಎಕ್ಸ್ 02.10 ಆಗಿರುತ್ತದೆ. ಅದು 7109 : 76 ಎಕ್ಸ್ 02.10 ಅಲ್ಲ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ (ಸಾಮಾನ್ಯ) ಬೆಂಗಳೂರಿನಲ್ಲಿ ದಾಖಲೆಯಲ್ಲಿ 10,210 ಪರಿಶಿಷ್ಟ ಜಾತಿಯ ಅಭ್ಯರ್ಥಿಗಳೂ ಸೇರಿದಂತೆ 95016 ಅಭ್ಯರ್ಥಿಗಳಿರುತ್ತಾರೆ. ಆದ್ದರಿಂದ ಅಧಿಸೂಚಿತವಾದ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಅವರ ನೊಂದಣಿ ಜೇಷ್ಠತೆಯ ಆಧಾರದ ಮೇರೆಗೆ ಪುರಸ್ಕರಿಸಲಾಗುವುದು. ಖಾಲಿ ಹುದ್ದೆಗಳು ಅಧಿಸೂಚಿತವಾದಾಗ ಇವರು ಹೆಸರನ್ನು ಸಹ ವರ್ಗ, ಅರ್ಹತೆ, ನೊಂದಣಿ, ಜೇಷ್ಠತೆ ಮೇರೆಗೆ ಪರಿಗಣಿಸಲಾಗುವುದು.

ಅರ್ಜಿಗಳನ್ನೊಪ್ಪಿಸುವುದು

1. ಶ್ರೀ ಮಲ್ಲಾರ ಗೌಡ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಬೆಳಗಾವಿ ಜಿಲ್ಲೆ, ನಿಪ್ಪಾನಿಯ ಕೈಗಾರಿಕಾ ಹಿಂದುಳಿದ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆಗಳನ್ನು ಬೆಳಸುವುದರ ಹಾಗೂ ಪ್ರೋತ್ಸಾಹ ಕೊಡುವುದರ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

2. ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಪೈಕಿ ನಯಾನಗರ

ಗ್ರಾಮದಲ್ಲಿ ಗುಡಿ ಕಟ್ಟುವ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

3. ಶ್ರೀ ಎಸ್.ಜಿ. ಹಾಲಪ್ಪ : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅ) ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಗ್ರಾಮದಲ್ಲಿ ಕರಲಕ್ಕಿ ಪಿಕಪ್ ನಾಲುವೆಯ ಪರಿಹಾರದ ಬಗ್ಗೆ.

ಆ) ಕಾರವಾರದ ಗೋಬರ್ ಅನಿಲ ಯಂತ್ರ ಮೇಲ್ವಿಚಾರಕರ ವೇತನದ ಬಗ್ಗೆ.

ಇ) ದಾವಣಗೆರೆಯ ಪೋಲೀಸ್ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ ಕೆಲಸ ಕೊಡುವುದರ ಬಗ್ಗೆ.

4. ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ ನನ್ನ ಹೆಸರಿನ ಮುಂದಿರುವ ಈ ಕೆಳಕಂಡ ಅರ್ಜಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅ) ಚಿಕ್ಕಮಗಳೂರು ತಾಲ್ಲೂಕಿನ ಅಣೂರು ಗ್ರಾಮದ ಮಾರಿ ಗಂಡಿ ರಸ್ತೆಗೆ ಜಲ್ಲಿ ಹಾಕಿಸುವುದರ ಬಗ್ಗೆ.

ಆ) ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕು ಪಳೇ ಆಲ್ಲೂರು ಗ್ರಾಮಕ್ಕೆ ಸಣ್ಣ ನೀರಾವರಿ ಯೋಜನೆಯ ಮೂಲಕ ಕುಡಿಯುವ ನೀರನ್ನು ಒದಗಿಸುವುದರ ಬಗ್ಗೆ.

ಅಧ್ಯಕ್ಷರು : ಅರ್ಜಿಗಳನ್ನು ಸಭೆಯು ಮಂಡಿಸಲಾಯಿತು.

ಶ್ರೀ ವಾಟಾಳ್‌ನಾಗರಾಜ್ : ಕೇಬಲ್ ಟಿ.ವಿ ಬಗ್ಗೆ ಇಂದು ಬಂದ್‌ನ್ನು ಆಚರಿಸುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ಹೇಳಿಕೆಯನ್ನು ಕೊಡುತ್ತದೆಯೇ?

ವಿಧಾನ ಸಭೆಯ ಮೊಗಸಾಲೆಗೆ ಅನಧಿಕೃತ ಪ್ರವೇಶದ ಬಗ್ಗೆ ಸಭಾಧ್ಯಕ್ಷರ ತೀರ್ಪು

ಅಧ್ಯಕ್ಷರು : ಈಗ ನಾನು ಸದನದ ಅಭಿಪ್ರಾಯವನ್ನು ಕೇಳುವುದಕೋಸ್ಕರ ಈ ವಿಚಾರವನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಕಳೆದ ಅಧಿವೇಶದಲ್ಲಿ ವಿಧಾನಸಭೆಯ ಮೊಗಸಾಲೆಯಲ್ಲಿ ಅನಧಿಕೃತ ಪ್ರವೇಶದ ಬಗ್ಗೆ ನಾನು ಒಂದು ತೀರ್ಮಾನ ತೆಗೆದು ಕೊಂಡಿದ್ದೆ. ತೀರ್ಮಾನವನ್ನು ತೆಗೆದುಕೊಂಡಿರತಕ್ಕ ಹಿನ್ನೆಲೆಯಲ್ಲಿ ಬಹಳ ಮಂದಿ ಸದಸ್ಯರು ನನ್ನ ಕಛೇರಿಗೆ ಬಂದು ಅನಧಿಕೃತ ಜನರನ್ನು ನಿಯಂತ್ರಣ ಮಾಡಿದ್ದರಿಂದ ನಾವುಗಳು ಶಾಂತಿ ಸಮಾಧಾನದಿಂದ ಚರ್ಚೆಯಲ್ಲಿ ಭಾಗವಹಿಸಲು ಯೋಗ್ಯವಾದಂತಹ ವಾತವರಣ ಮಾಡಿದೆ ಎಂದು ತಿಳಿಸಿದ್ದಾರೆ. ಈ ದೃಷ್ಟಿಯಿಂದ ನಾನು ಪಹರೆ ಸಿಬ್ಬಂದಿಗಳಿಗೆ ಮೊಗಸಾಲೆಯಲ್ಲಿ ಅನಧಿಕೃತವಾಗಿ ಯಾರು ಬಂದರು ಬಿಡಬಾರದೆಂದು ಹೇಳಿದ್ದೆ, ನನ್ನ ಈ ತೀರ್ಮಾನವನ್ನು ಅವರು ನಿರ್ವಹಿಸುತ್ತಿದ್ದಾರೆ. ನನಗೆ ಸಂತೋಷವೇನೆಂದರೆ ಕೆಲವು ಮಂತ್ರಿಗಳು, ಮಾನ್ಯ ಸಂಸದೀಯ ಸಚಿವರು, ಮಾನ್ಯ ಸಹಕಾರ ಸಚಿವರು ನನ್ನ ಕ್ರಮವನ್ನು ಒಪ್ಪಿ ಅವರೊಂದಿಗೆ ಬಂದಂತಹ ಜನರನ್ನು ಪಹರೆ ಸಿಬ್ಬಂದಿಯವರು ತಡೆದ ಮೇಲೆ ಅಲ್ಲಿಯೆ ಡಿಸ್‌ಪೋಸ್ ಮಾಡಿದ್ದಾರೆ. ಆದರೆ ಕೆಲವು ಸದಸ್ಯರು ವಾಚ್ ಅಂಡ್ ವಾರ್ಡ್ ಮೇಲೆ ವಾಗ್ದಾಳಿಕ್ಕೆ ಇಳಿದು ವಾಚಾಮಗೋಚರವಾಗಿ ಅವರನ್ನು ಬೈದಿದ್ದಾರೆ. ಇದು ನನ್ನ ಆಜ್ಞೆ, ಅದನ್ನು ಪರಿಪಾಲನೆ ಮಾಡತಕ್ಕದ್ದು ಪಹರೆ ಸಿಬ್ಬಂದಿಯ ಕರ್ತವ್ಯ, ಅವರನ್ನು ಸುಮ್ಮನೆ ಬೈದರೆ ಏನು ಪ್ರಯೋಜನ ಇದು ಒಂದು ರೀತಿ ನನ್ನನ್ನೆ ಬೈದಂತಾಗುತ್ತದೆ. ನಾನು ಸಭೆಯ ಒಟ್ಟಾರೆ ಅಭಿಪ್ರಾಯವನ್ನು ಕೇಳಿ ಈ ರೀತಿ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಸಂಸತ್ತಿನಲ್ಲಿರತಕ್ಕ ಒಂದು ವ್ಯವಸ್ಥೆ ಮಾಜಿ ಮತ್ತು ಹಾಲಿ ಸದಸ್ಯರುಗಳು ಹಾಗೂ ಪ್ರಸ್ನಪತ್ರನ್ನು ಪೊರತು ಪಡಿಸಿ, ಬೇರೆಯವರನ್ನು